**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC**-82/2024 **PW**: 1

**ದಿಃ 23.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ ಪಿ ಎಚ್ ಪಿ ವಕೀಲರಿಂದ ಃ**

ಮೃತ ವ್ಯಕ್ತಿಯು ನನ್ನ ಯಜಮಾನರಾಗಿರುತ್ತಾರೆ. 2 ರಿಂದ 4 ನೇ ಅರ್ಜಿದಾರರು ಮೃತ ವ್ಯಕ್ತಿಗೆ ಕ್ರಮವಾಗಿ ಮಕ್ಕಳು ಮತ್ತು ತಾಯಿಯಾಗಿರುತ್ತಾರೆ. ಮೃತ ವ್ಯಕ್ತಿಯ ವಾರಸಾದಾರರು ನಾವು ಎಂದು ತೋರಿಸಲು ಯಾವದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ತಾವು ಯಾವದೇ ವಾರಸಾ ಪ್ರಮಾಣ ಪತ್ರ ಹಾಜರುಪಡಿಸದಿದ್ದರೂ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ಕಣ್ಣಾರೆ ನೋಡಿರುವದಿಲ್ಲ. ತಾವು ಹೇಳುವ ರೀತಿಯ ಯಾವದೇ ನಿರ್ಲಕ್ಷ್ಯತೆ ಅಪಾದಿತ ವಾಹನದ ಚಾಲಕ ಮಾಡಿರುವದಿಲ್ಲ ಎಂದರೆ ಸರಿಯಲ್ಲ. ತಮ್ಮ ಯಜಮಾನರು ಪ್ರಯಾಣಿಸುತ್ತಿದ್ದ ಕಾರಿನ ಚಾಲಕ ವೇಗವಾಗಿ ಚಲಾಯಿಸಿ ಅಪಘಾತ ಪಡಿಸಿರುತ್ತಾರೆಂದರೆ ಸರಿಯಲ್ಲ. ಸದರಿ ಕಾರಿನ ಚಾಲಕನಿಗೆ ಚಾಲನಾ ಪತ್ರ ಇತರಲಿಲ್ಲ ಹಾಗೂ ವಾಹನಕ್ಕೆ ವಿಮೆ ಇರದ ಕಾರಣ ಬಸ್ ಚಾಲಕನ ಮೇಲೆ ಈ ಪ್ರಕರಣವನ್ನು ತಪ್ಪಾಗಿ ಹಾಕಿರುತ್ತೀರಿ ಎಂದರೆ ಸರಿಯಲ್ಲ. ಆದ್ದರಿಂದ 2 ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಪುರೋ ವೆಲನೆಸ ಪ್ರೈ ಲಿ ಕೆಲಸ ಮಾಡುತ್ತಿದ್ದರು. ತಮ್ಮ ಗಂಡನ ಸಂಬಳವು ಮಾಸಿಕ 26 ಸಾವಿರ ರೂ ಇತ್ತು ಎಂದು ಹೇಳುತ್ತಿರುವದು ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿತಯಾಗಿ ತಮ್ಮ ಗಂಡನಿಗೆ 15 ಸಾವಿರ ರೂ ಗಳ ಇನ್ಸೆಂಟಿವ ಇತ್ತು ಎಂದು ತೋರಿಸಿರುವದು ಸಹ ಸುಳ್ಳು ಎಂದರೆ ಸರಿಯಲ್ಲ. ತಾವು ಹಾಜರುಪಡಿಸಿರುವ ಬ್ಯಾಂಕ ಸ್ಟೇಟಮೆಂಟನಲ್ಲಿ ತಾವು ಆದರಿಸಿರುವ ಇನ್ಸೆಂಟಿವ್ಸ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ತಾವು ಸದರಿ ದಾಖಲೆಯನ್ನು ಕೇಸಗೆ ಅನುಕೂಲವಾಗುವಂತೆ ಸೃಷ್ಟಿಸಿ ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ. ಬಸ ಚಾಲಕನಿಗೆ ಚಾಲನಾ ಪತ್ರ ಇರದ ಕಾರಣ ವಿಮಾ ಕಂಪನಿಯು ಪರಿಹಾರ ಕೊಡಲು ಬಾದಸ್ಥರಲ್ಲ ಎಂದರೆ ಸರಿಯಲ್ಲ. ಅಪಘಾತವು ಕಾರು ಚಾಲಕನ ತಪ್ಪಿನಿಂದ ಆಗಿರುವ ಕಾರಣ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ತಮ್ಮ ಗಂಡ ತಾವು ಹೇಳುವ ರೀತಿ ಯಾವದೇ ಕಂಪನಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಮತ್ತು ಅವರಿಗೆ ಅರ್ಜಿಯಲ್ಲಿ ನಮೂದಿಸಿರುವಷ್ಟು ಸಂಬಳ ಮತ್ತು ಭತ್ಯೆ ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ತಾವು ಕೇಳಿರುವ ಪರಿಹಾರ ಕೊಡಲು ವಿಮಾ ಕಂಪನಿಯು ಬಾದ್ಯರಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರು ಏಕತರ್ಫಿಯಾದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಮರು ವಿಚಾರಣೆ ಇಲ್ಲಾ**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**